1ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 946-2025

**ಪಿ.ಡಬ್ಲ್ಯು -9, ಪಿ.ಡಬ್ಲ್ಯು**-4

**ಸಾಕ್ಷಿದಾರರ ಹೆಸರು** : ಅರ್ಪಿತಾ ಎಂ.
ಗಂಡನ **ಹೆಸರು** : ಶಶಿಧರ್ ಎನ್.
**ವಯಸ್ಸು** : 32 ವರ್ಷ
**ಉದ್ಯೋಗ** : ಅಬಕಾರಿ ಉಪ ನಿರೀಕ್ಷಕರು, ಸಾಗರ ವಲಯ, ಸಾಗರ
**ವಾಸ** : ಸಾಗರ

**ಪ್ರಮಾಣೀಕರಿಸಿದ ದಿನಾಂಕ :**22.06.2026.

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು ದಿ:21.12.2024 ರಿಂದ ಇಲ್ಲಿಯವರೆಗೂ ಸಾಗರದ ವಲಯ ಕಚೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ:27.02.2025 ರಂದು ಚಾಸ 1 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

3. ದಿ:01.03.2025 ರಂದು ಚಾಸ 2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

4. ದಿ:03.03.2025 ರಂದು ಹಿರೇನಲ್ಲೂರು ಗ್ರಾಮಪಂಚಾಯಿತಿಯ ಅಧಿಕಾರಿಗಳಿಗೆ ವಾಸ ದೃಢೀಕರಣ ಪತ್ರವನ್ನು ಪೂರೈಸುವಂತೆ ಕೋರಿ ಪತ್ರವನ್ನು ನೀಡಿರುತ್ತೇನೆ.

5. ದಿ:07.03.2025 ರಂದು ಗ್ರಾಮಪಂಚಾಯಿತಿ ಅಧಿಕಾರಿಗಳು ನೀಡಿದ ದೃಢೀಕರಣ ಪತ್ರವನ್ನು ಸ್ವೀಕರಿಸಿ ಅದನ್ನು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

6. ದಿ:11.03.2025 ರಂದು ಚಾಸ 6 ರವರಿಗೆ ವಿಚಾರಣೆಗೆ ಹಾಜರಾಗುವಂತೆ ಕೋರಿ ನೋಟೀಸನ್ನು ನೀಡಿರುತ್ತೇನೆ.

7. ದಿ:12.03.2025 ರಂದು ಚಾಸ 6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

8. ದಿ:17.03.2025 ರಂದು ರಾಸಾಯನಿಕ ಪರೀಕ್ಷೆಗಾಗಿ ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮುದ್ದೆ ಮಾಲನ್ನು ರಾಸಾಯನಿಕ ಪ್ರಯೋಗಾಲಯ, ಚಿತ್ರದುರ್ಗಕ್ಕೆ ಚಾಸ 7 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ.

9. ದಿ:20.03.2025 ರಂದು ಆರೋಪಿತರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

10. ದಿ:24.03.2025 ರಂದು ರಾಸಾಯನಿಕ ಪ್ರಯೋಗಾಲಯದವರು ನೀಡಿದ ವರದಿಯನ್ನು ಸ್ವೀಕರಿಸಿ ಅದನ್ನು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

11. ದಿ:05.04.2025 ರಂದು ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಸೂಕ್ತ ಸಾಕ್ಷಾಧಾರ ದೊರೆತಿದ್ದರಿಂದ ಆರೋಪಿತರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

12. ಸಾಕ್ಷಿಯು ನಿಪಿ 13 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 13(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯನಿಕ ಪ್ರಯೋಗಾಲಯದವರು ನೀಡಿರುವ ವರದಿಯನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 14 ಎಂದು, ಸಾಕ್ಷಿಯ ಸಹಿಯನ್ನು ನಿಪಿ 14 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ:03.03.2025 ರಂದು ಗ್ರಾಮಪಂಚಾಯಿತಿ ಅಧಿಕಾರಿಗಳು ಹಿರೇನಲ್ಲೂರು ಗ್ರಾಮ ಪಂಚಾಯಿತಿರವರಿಗೆ ನೀಡಿರುವ ಪತ್ರವನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪತ್ರವನ್ನು ನಿಪಿ 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗ್ರಾಮಪಂಚಾಯಿತಿ ಕಾರ್ಯಾಲಯ, ಹಿರೇನಲ್ಲೂರು ರವರು ನೀಡಿರುವ ದೃಢೀಕರಣ ಪತ್ರವನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೃಢೀಕರಣ ಪತ್ರವನ್ನು ನಿಪಿ 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ 16(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸ 6 ರವರ ಹೇಳಿಕೆಯನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಚಾಸ 6 ರವರ ಹೇಳಿಕೆಯನ್ನು ನಿಪಿ 17 ಎಂದು, ಸಾಕ್ಷಿಯ ಸಹಿಯನ್ನು ನಿಪಿ 17(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರ ಹೇಳಿಕೆಗಳನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಆರೋಪಿತರ ಹೇಳಿಕೆಯನ್ನು ನಿಪಿ 18 ಮತ್ತು 19 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 18(ಎ) ಮತ್ತು 19(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸ 6 ರವರಿಗೆ ನೀಡಿರುವ ನೋಟೀಸ್ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಚಾಸ 6 ರವರಿಗೆ ನೀಡಿರುವ ನೋಟೀಸ್ ಅನ್ನು ನಿಪಿ 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ 20(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಛಾಯಾಚಿತ್ರಗಳನ್ನೊಳಗೊಂಡ ಸಿ.ಡಿ.ಯನ್ನು ಹಾಜರುಪಡಿಸಿದ್ದು, ಸಿ.ಡಿ.ಯನ್ನು ನಿಪಿ 21 ಎಂದು ಗುರುತಿಸಲಾಯಿತು. ಸಾಕ್ಷಿಯು ಚಲನ ವಲನ ಪುಸ್ತಕದ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 22 ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲು 1 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಜಿ.ಎಸ್.ಕೆ. ವಕೀಲರಿಂದ</u>

1. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಕ್ಕೆ ಸಂಬಂಧಿಸಿದಂತೆ ಲಾಗ್ ಪುಸ್ತಕದಲ್ಲಿ ನಮೂದನೆ ಇರುವುದಿಲ್ಲ. ಘಟನಾ ಸ್ಥಳದ ಸ್ಥಳೀಯರ ಹೇಳಿಕೆಗಳನ್ನು ಪಡೆದಿರುವುದಿಲ್ಲ. ಮನೆಯ ವಿದ್ಯುತ್ ಮೀಟರ್ ಸಂಖ್ಯೆ ಮತ್ತು ಮನೆ ಸಂಖ್ಯೆಯನ್ನು ಪಡೆದಿರುವುದಿಲ್ಲ. ಗ್ರಾಮ ಪಂಚಾಯಿತಿ ಅಧಿಕಾರಿಯ ಹೇಳಿಕೆಯನ್ನು ನಾನು ಪಡೆದಿರುವುದಿಲ್ಲ. ಡಿಮ್ಯಾಂಡ್ ರಿಜಿಸ್ಟರ್ ನಲ್ಲಿ ಗ್ರಾಮದ ಹೆಸರಿಲ್ಲ ಎಂದರೆ ಸರಿ. ಚಾಸ 7 ರವರಿಗೆ ನಾನು ಯಾವುದೇ ಲಿಖಿತ ಆದೇಶವನ್ನು ನೀಡಿರುವುದಿಲ್ಲ. ಚಾಸ 1 ರವರು ದಾಳಿಯ ಕಾಲಕ್ಕೆ ಇಲಾಖಾ ವಾಹನವನ್ನು ಉಪಯೋಗಿಸಿದ ಬಗ್ಗೆ ಲಾಗ್ ಪುಸ್ತಕ ಮತ್ತು ಕರ್ತವ್ಯದಲ್ಲಿದ್ದ ಬಗ್ಗೆ ದಿನಚರಿ ಪುಸ್ತಕದ ನಕಲುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

2. ಮುದ್ದೆ ಮಾಲನ್ನು ನಾಶಪಡಿಸಿದ ನಮ್ಮ ಅಧಿಕಾರಿಯಿಂದ ವರದಿ ಪಡೆದಿರುತ್ತೇವೆ, ಆದರೆ ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದಾಂ ವಹಿಯ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನಾನು ಆರೋಪಿತರ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾದ ನಿಟ್ಟಿನಲ್ಲಿ ತನಿಖೆಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.